# ಆಹಾ ಸುದ್ದಿ!

★ ಸಸಿತೋಟ




ಬ್ಯೂನಸ್ ಐರಿಸ್‌ನಲ್ಲಿ ಇತ್ತೀಚೆಗೆ ಸೋಪ್‌ಬಾಕ್ಸ್ ರೇಸ್ ನಡೆಯಿತು. ಸ್ಪರ್ಧಿಗಳು ಮನೆಯಲ್ಲೇ ತಯಾರಿಸಿದ ಎಂಜಿನ್ ಇಲ್ಲದ ವಾಹನಗಳನ್ನು 400 ಮೀಟರ್ ಟ್ರ್ಯಾಕ್‌ನಲ್ಲಿ ಓಡಿಸಿ ಖುಷಿಪಟ್ಟರು. ಪೆಟ್ರೋಲ್ ದಾಹವಿಲ್ಲದ ಈ ವಾಹನಗಳು ಮುಂದಿನ ದಿನಗಳಲ್ಲಿ ರಸ್ತೆಗೂ ಇಳಿದರೆ...! ಕಾಲು ನಡಿಗೆಯವರು ವಾಹನಗಳಿಗೆ ಪೈಪೋಟಿ ನೀಡಬಹುದು.

ನ್ಯೂ ಹ್ಯಾಂಪ್‌ಶೈರ್‌ನ ದೋತಿಗೆ 90 ವರ್ಷ. ಆಕೆ ಈಗಲೂ ಟ್ಯಾಕ್ಸಿ ಚಾಲಕಿ. ಆರಾಮವಾಗಿ ನಗರದಲ್ಲಿ ಪ್ರಯಾಣಿಕರನ್ನು ಓಡಾಡಿಸುತ್ತಾಳಂತೆ, ಅದೂ ಜಿಪಿಎಸ್ ನೆರವಿಲ್ಲದೆ. ಆಂಟಿ, ಗ್ರ್ಯಾನಿ ಎಂದೆಲ್ಲ ಕರೆಸಿಕೊಂಡ ದೋತಿ 90 ಆದರೂ ನಿವೃತ್ತಿಗೆ ಮನಸ್ಸು ಮಾಡಿಲ್ಲವಂತೆ. ದೋತಿಗಲ್ಲ, ಆಕೆಯ ಮೇಲೆ ನಂಬಿಕೆ ಇಟ್ಟು ಚಾಲನಾ ಪರವಾನಗಿ ಕೊಟ್ಟವರಿಗೆ ಭೇಷ್ ಎನ್ನಬೇಕು!



ಒಳ ಉಡುಪುಗಳ ಅಂತರರಾಷ್ಟ್ರೀಯ ತಯಾರಿಕಾ ಕಂಪೆನಿ ವಿಕ್ಟೋರಿಯಾಸ್ ಸೀಕ್ರೆಟ್ ಫ್ಯಾಷನ್ ಒಂದು ಕೋಟಿ ಡಾಲರ್ (ಅಂದಾಜು 63 ಕೋಟಿ ರೂಪಾಯಿ) ಮೌಲ್ಯದ ಒಳ ಉಡುಪನ್ನು ಹೊರತಂದಿದೆ. ಒಳಗೇ ಇಟ್ಟುಕೊಳ್ಳುವ ಈ ಸೀಕ್ರೆಟ್ ಫ್ಯಾಷನ್‌ಗೆ ಎಷ್ಟು ಬೆಲೆ ಕೊಟ್ಟರೇನು, ಹೊರಗಿನವರಿಗೆ ದುಬಾರಿ ದರ, ವೈಭವ ಗೊತ್ತಾಗದಿದ್ದರೆ!

ಫ್ರಾನ್ಸ್ ನಗರ ಬೋರ್ಡಾಕ್ಸ್‌ನಲ್ಲಿ ಸರ್ಕಸ್ ಪ್ರಾಣಿ ಲಾಮಾ 'ಸರ್ಜಿ' ಯನ್ನು ನಾಲ್ಕು ಮಂದಿ ಅಪಹರಿಸಿದರು. ನಡುರಾತ್ರಿ ನಡುರಸ್ತೆಯಲ್ಲಿ ಆರಾಮವಾಗಿ ಅದರ ಜೊತೆ ವಾಕಿಂಗ್ ಮಾಡಿ ವಾಪಸ್ ಕರೆತಂದರು. ಮದ್ಯದ ವಶದಲ್ಲಿದ್ದ ಈ ನಾಲ್ಕು ಮಂದಿಯ ವಿರುದ್ಧ ಕೊಟ್ಟಿದ್ದ ಅಪಹರಣ ದೂರನ್ನು ಸರ್ಕಸ್ ಮಾಲೀಕ ವಾಪಸ್ ತೆಗೆದುಕೊಂಡ. ಕಥೆ ಇಲ್ಲಿಗೆ ಮುಗಿಯಲಿಲ್ಲ. 'ಸರ್‌ಜಿ'ಗಳ ಜೊತೆ ವಾಕಿಂಗ್ ಕಳಿಸಲು ಸರ್ಜಿಯನ್ನು ಬಾಡಿಗೆ ಮೇಲೆ ಕೊಡಲಾಗುವುದು ಎಂದು ಅದರ ಮಾಲೀಕ ಈಗ ಬೋರ್ಡ್ ಹಾಕಿಕೊಂಡು ಕೂತಿದ್ದಾನೆ. ಕುಡುಕರಿಂದಲೂ ದುಡ್ಡು ಗಳಿಸುವ ಪಾಠ ಕಲಿತುಕೊಂಡುಬಿಟ್ಟ.



ಇಂಗ್ಲೆಂಡ್‌ನ ನಾರ್ಥಂಪ್ಟನ್‌ನಲ್ಲಿ ಮನೆಯನ್ನು ಕಳವು ಮಾಡಿದ ಕಳ್ಳರಿಗೇ ಮನೆಯ ಮಾಲೀಕರು ಕ್ಷಮೆ ಕೇಳಿದ್ದಾರೆ. ದಂಪತಿ ಮನೆಯಲ್ಲಿ ಇಲ್ಲದಿದ್ದಾಗ ರಾತ್ರಿ ಬಾಗಿಲು ಮುರಿದ ಕಳ್ಳರು ಮನೆಯೊಳಗೆ ಅಮೂಲ್ಯ ವಸ್ತುಗಳು ಸಿಗದೇ ಬರಿಗೈಲಿ ಹೋದರು. ಬೆಲೆ ಬಾಳುವ ವಸ್ತುಗಳನ್ನು ಖರೀದಿಸಿ ಮನೆಯೊಳಗೆ ಇಡದೇ ಇರುವುದಕ್ಕೆ ದಂಪತಿ ಕಳ್ಳರಿಗೆ ಕ್ಷಮೆ ಯಾಚಿಸಿ ಬರೆದ ಪತ್ರವನ್ನು ಮನೆಯ ಬಾಗಿಲಿಗೆ ಅಂಟಿಸಿದ್ದಾರಂತೆ. ಮತ್ತೆ ಬರುವ ಅವಶ್ಯಕತೆಯೂ ಇಲ್ಲ ಎಂದು ಬರೆದಿದ್ದಾರಂತೆ. ಅಮೂಲ್ಯ ವಸ್ತುಗಳನ್ನು ಹೊಂದಿದವರೂ ಈ ರೀತಿ ಬರೆದರೆ, ಮೂರ್ಖರಾಗುವವರು ಯಾರೋ!

ಬೊಲಿವಿಯಾದಲ್ಲಿ ನವೆಂಬರ್ ಬಂತೆಂದರೆ 'ತಲೆಬುರುಡೆ ದಿನ' ಆಚರಿಸುವ ಸಂಭ್ರಮ. ಮೃತಪಟ್ಟ ಕುಟುಂಬ ಸದಸ್ಯರ ತಲೆ ಬುರುಡೆಗಳನ್ನು ಮನೆಯಲ್ಲೇ ಇಟ್ಟುಕೊಂಡು ಪೂಜೆ ಮಾಡುತ್ತಾರಂತೆ. ಜೊತೆಗೆ ಅವರಿಗೆ ಇಷ್ಟವಾದ ಸಿಗರೇಟ್, ಮದ್ಯ.. ಹೀಗೆ ಎಲ್ಲವಕ್ಕೂ ಪೂಜೆ. ಬುರುಡೆ ಮನೆ ರಕ್ಷಿಸುವ ತಾಯಿತ ಎಂಬ ನಂಬಿಕೆ ಅಲ್ಲಿದೆಯಂತೆ. ನಮ್ಮಲ್ಲಿ ವಾಮಾಚಾರಕ್ಕೆ ಬಳಕೆಯಾಗುವುದು ಅಲ್ಲಿ ಪೂಜೆಗೆ ಬಳಕೆಯಾಗುತ್ತದೆ, ಇಷ್ಟೇ ವ್ಯತ್ಯಾಸ.

